# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 114

## ಈಗಿನ ಕಾಲದಲ್ಲಿ ದೇವಸ್ಥಾನದ ಹುಂಡಿಗೆ ಹಣ ಹಾಕಬಹುದೇ?

ಗುರುಗಳೇ, ಮನೆಯ ದೇವರಿಗೆ ಕಾಣಿಕೆ ಹಾಗೂ ನೈವೇದ್ಯ ಮಾಡಿಸಲು ಹೋದಾಗ ಅಲ್ಲಿ ಪೂಜೆ ಮಾಡುವ ಅರ್ಹತೆ ಇಲ್ಲದವರು (ಬ್ರಾಹ್ಮಣೇತರರಾಗಿರಬಹುದು, ಬ್ರಾಹ್ಮಣರಾಗಿದ್ದೂ ಬ್ರಾಹ್ಮಣರಂತೆ ಬದುಕುತ್ತಿಲ್ಲದವರಾಗಿರಬಹುದು) ಪೂಜೆ ಮಾಡುತ್ತಿದ್ದರೆ ನಾವು ಏನು ಮಾಡಬೇಕು ಕಾಣಿಕೆ ಡಬ್ಬಿಗೆ ಹಾಕಿದರೂ ಅದು ಕೂಡ ಕಮಿಟಿಗೆ ಹೊಗುತ್ತದೆ ಇಂತಹ ಸಂದರ್ಭಗಳಲ್ಲಿ ಶಾಸ್ತ್ರ ಏನು ಹೇಳುತ್ತದೆ?

— ವಿಜಯೀಂದ್ರ

ಪೂಜ್ಯ ಆಚಾರ್ಯರೇ, ನಾನು ಒಂದು ದೇವಸ್ಥಾನದಲ್ಲಿಯೇ ಹಿಂದೆ ಕೆಲಸ ಮಾಡುತ್ತಿದ್ದೆ. ಅಲ್ಲಿ ನಡೆಯುವ ಹಣದ ದುರುಪಯೋಗವನ್ನು ಕಣ್ಣಾರೆ ಕಂಡಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ

ದೇವಸ್ಥಾನಗಳಿಗೆ ಸಾಮಾನ್ಯಜನರು ಹಣ ನೀಡುವದು ಎಷ್ಟು ಸಮಂಜಸ? ಈ ರೀತಿ ನೀಡುವದರಿಂದ ಪುಣ್ಯ ಬರುತ್ತದೆಯೇ?

— ಉಮಾ ನಾಗರಾಜ್

## ದೇವರನ್ನು ನೋಡಲು ಹೋದಾಗ ಏನು ನೀಡಬೇಕು?

ದೇವರು, ಗುರುಗಳು ಹಿರಿಯರನ್ನು ಕಾಣಲು ಹೋದಾಗ ಬರಿಗೈಯಲ್ಲಿ ಹೋಗತಕ್ಕದ್ದಲ್ಲ. ಅವರಿಗೆ ಗೌರವ ಸಮರ್ಪಣೆ ಮಾಡುವಂತೆ ಕಾಣಿಕೆಯನ್ನು ಒಯ್ಯಬೇಕು.

ಈ ಕಾಣಿಕೆ ಹಣದ ರೂಪದಲ್ಲಿಯೇ ಇರಬೇಕೆಂಬ ನಿಯಮ ಸರ್ವಥಾ ಇಲ್ಲ. ಹಣ್ಣು, ಹಂಪಲು, ವಸ್ತ್ರ, ಅವರಿಗೆ ಉಪಯೋಗ ಬೀಳುವ ಯಾವುದೇ ಪದಾರ್ಥ, ದೇವಸ್ಥಾನಗಳಿಗೆ ಉಪಯೋಗವಾಗುವ

ಪದಾರ್ಥಗಳು ಹೀಗೆ ಯಾವುದನ್ನೂ ಒಯ್ದು ಸಮರ್ಪಿಸಬಹುದು.

ಶ್ರೀಮದಾಚಾರ್ಯರು ಮೊದಲ ಬಾರಿ ಬದರಿಕಾಶ್ರಮಕ್ಕೆ ಹೋಗುವಾಗ ಗೀತಾಭಾಷ್ಯವನ್ನು ರಚಿಸಿ ಕಾಣಿಕೆಯಾಗಿ ಸಮರ್ಪಿಸಿದರು ಎಂದು ಮಧ್ವವಿಜಯ ದಾಖಲಿಸುತ್ತದೆ — "ಗೀತಾಭಾಷ್ಯಂ ಆರ್ಪಯದುಪಾಯನಮಸ್ಮೈ" ಎಂದು.

ಇವತ್ತಿಗೂ ಚಿಪ್ಪಗಿರಿಗೆ ಶ್ರೀವಿಜಯದಾಸಾರ್ಯರ ದರ್ಶನಕ್ಕೆ ಹೋಗುವ ಅನೇಕ ಜನ ಸುಳಾದಿಗಳನ್ನು ಕಲಿತು ಅವರ ಮುಂದೆ ಹಾಡಿ ಒಪ್ಪಿಸಿ ಬರುತ್ತಾರೆ.

ಇದು ಸರ್ವಶ್ರೇಷ್ಠವಾದ ಕ್ರಮ.

ಭಗವಂತನಿಗೆ ಗುರುಗಳಿಗೆ ಜ್ಞಾನಕಾರ್ಯಕ್ಕಿಂತ ಮಿಗಿಲಾಗಿ ಪ್ರಿಯವಾದದ್ದು ಯಾವುದೂ ಇಲ್ಲ. ಹೀಗಾಗಿ ಅವರಿಗೆ ಈ ರೀತಿ ಗ್ರಂಥಗಳನ್ನು ಬರೆದು, ಅಥವಾ ಗ್ರಂಥಗಳನ್ನು ಕಲಿತು, (ಕನಿಷ್ಠ ಒಂದು ಸ್ತೋತ್ರ, ಹಾಡು ಮುಂತಾದವು) ಅವರ ಮುಂದೆ ಒಪ್ಪಿಸಿ ಬಂದಲ್ಲಿ ಆ ದೇವತಾ-ಗುರುಗಳ ಅತಿಶಯಪ್ರೀತಿಯನ್ನು ನಾವು ಸಂಪಾದಿಸುತ್ತೇವೆ.

ಇದು ನೇರವಾಗಿ ದೇವರ ಅನುಗ್ರಹವನ್ನು ಸಂಪಾದಿಸುವ ರಾಜಮಾರ್ಗ.

## ಹಣದ ಸಮರ್ಪಣೆಯ ಉದ್ದೇಶ

ದೇವಸ್ಥಾನ, ಮಠ ಎನ್ನುವದು ಸಾವಿರಾರು ಜನರ ಶ್ರದ್ಧಾಕೇಂದ್ರಗಳು. ಅಲ್ಲಿಗೆ ಬಂದು ಹೋಗುವ ಜನ ಹೆಚ್ಚು ಮತ್ತು ನಿರಂತರ. ಹೀಗಾಗಿ ಬಂದ ಜನರಿಗೆ ಊಟ ವಸತಿಗಳ ಅನಿವಾರ್ಯತೆ ಇರುತ್ತದೆ. ಆ ದೇವಸ್ಥಾನವನ್ನು ನೋಡಿಕೊಳ್ಳುವ ಜನ ಆ ವ್ಯವಸ್ಥೆಯನ್ನು ಪರಿಕಲ್ಪಿಸುತ್ತಾರೆ. ಹೀಗಾಗಿ ಅದಕ್ಕೆ ಹಣದ ಅನಿವಾರ್ಯತೆ ಇರುತ್ತದೆ.

ಭಕ್ತರು ನೀಡುವ ಹಣ ಸಾವಿರಾರು ಭಕ್ತರಿಗೆ ಉಪಯೋಗವಾಗುವದರಿಂದ ಅದರಿಂದ ಅವಶ್ಯವಾಗಿ ಪುಣ್ಯ ದೊರೆಯುತ್ತದೆ.

ಸ್ನಾನಘಟ್ಟಗಳನ್ನು ಕಟ್ಟಿಸುವದು, ಹತ್ತಿ ಇಳಿಯಬೇಕಾದ ಕಡೆಗಳಲ್ಲಿ ಮೆಟ್ಟಿಲು ಕಟ್ಟಿಸುವದು, ರಸ್ತೆ ಹಾಕಿಸುವದು, ಭಕ್ತರು ಉಳಿದುಕೊಳ್ಳಲು ವಸತಿಗೃಹಗಳನ್ನು

ಕಟ್ಟಿಸುವದು, ಭಕ್ತರ ಊಟಕ್ಕೆ ಅನುಕೂಲ ಮಾಡಿಕೊಡುವದು, ಶ್ರದ್ಧಾಕೇಂದ್ರವಾದ ದೇವಸ್ಥಾನವನ್ನು ಭವ್ಯವಾದ ರೀತಿಯಲ್ಲಿ ಕಟ್ಟಿಸುವದು ಇವೆಲ್ಲವೂ ಪುಣ್ಯದ ಕಾರ್ಯ. ಸಂಶಯವಿಲ್ಲ.

ಒಬ್ಬ ವ್ಯಕ್ತಿಗೇ ಇದನ್ನು ಮಾಡಲು ಸಾಧ್ಯವಿಲ್ಲದೇ ಇದ್ದಾಗ ಸಾವಿರಾರು ಜನರು ನೀಡುವ ಸಣ್ಣಸಣ್ಣ ಮೊತ್ತದ ಹಣವನ್ನು ಕೂಡಿಸಿಯೂ  ಈ ಕಾರ್ಯಗಳು ನಡೆಯುತ್ತವೆ, ಹೀಗಾಗಿ ಕಾಣಿಕೆ ಹುಂಡಿಗಳ ಪರಿಕಲ್ಪನೆ ಬಂದಿದೆ. ತಪ್ಪಿಲ್ಲ. ನಾವು ನೀಡುವ ಸಣ್ಣ ಮೊತ್ತವೂ ಸದುಪಯೋಗ ಗೊಂಡಲ್ಲಿ ಅದು ಮಹತ್ತರ ಪುಣ್ಯವನ್ನು ನೀಡುತ್ತದೆ.

ಈಗ ಪ್ರಶ್ನೆಗಳು —

**1. ಈ ಹಣ ದುರುಪಯೋಗವಾಗುತ್ತಿದ್ದಾಗ ನೀಡಬೇಕೇ?**

ಉತ್ತರ ಅತ್ಯಂತ ಸರಳವಿದೆ. ಸರ್ವಥಾ ನೀಡಬಾರದು. ನಾವು ಯಾವ ಉದ್ದೇಶಕ್ಕಾಗಿ

ನೀಡುತ್ತಿದ್ದೇವೇಯೋ ಆ ಉದ್ದೇಶ ಸಫಲವಾಗದೇ ಇದ್ದಲ್ಲಿ ಸರ್ವಥಾ ನೀಡಬಾರದು.

**2. ಆದರೆ ನಮ್ಮ ಮನೆದೇವರ ದೇವಸ್ಥಾನದಲ್ಲಿಯೇ ಇಂತಹ ದುರುಪಯೋಗ ನಡೆದಾಗ ಏನು ಮಾಡಬೇಕು? ಮನೆದೇವರ ದರ್ಶನ ಪಡೆಯದೇ, ಸೇವೆ ಮಾಡದೇ ಇರಲು ಸಾಧ್ಯವೇ?**

ಮನೆದೇವರ ದೇವಸ್ಥಾನವಾಗಿರಲಿ, ಅಥವಾ ಇತರ ಯಾವುದೇ ಇಷ್ಟದೈವದ ದೇವಸ್ಥಾನವಾಗಿರಲಿ, ಹಣ ದುರುಪಯೋಗ-ವಾಗುತ್ತಿದ್ದರೆ ಸರ್ವಥಾ ನೀಡಬಾರದು.

**3. ಆದರೆ ನಮ್ಮ ಸೇವೆಯನ್ನು ಸಲ್ಲಿಸುವ ಕ್ರಮ ಹೇಗೆ.**

ಭಗವದ್ಗೀತೆ ಅತ್ಯಂತ ಸ್ಪಷ್ಟವಾಗಿ ಮಾರ್ಗವನ್ನು ತಿಳಿಸುತ್ತದೆ. ನಾವು ಮಾಡುವ ದಾನ, ಯೋಗ್ಯರಾದ ವ್ಯಕ್ತಿಗಳಿಗೆ, ಯೋಗ್ಯವಾದ ಉದ್ದೇಶದಿಂದ ನೀಡತಕ್ಕದ್ದು.

ಅಪಾತ್ರರಿಗೆ ಮಾಡುವ ದಾನ, ಕೆಟ್ಟ ಕೆಲಸಕ್ಕೆ ಉಪಯೋಗಿಸುವವರಿಗೆ ನೀಡುವ ದಾನ ತಾಮಸ ಎಂದೇ ಕರೆಸಿಕೊಳ್ಳುತ್ತದೆ.

ಮನೆದೇವರಿಗೆ, ಇಷ್ಟದೇವರಿಗೆ ಸಮರ್ಪಿಸಬೇಕಾದ ಹಣವನ್ನು ನಿಮ್ಮ ಜೊತೆಯಲ್ಲಿ ಒಯ್ಯಿರಿ. ದೇವರ ದರ್ಶನವನ್ನು ಮಾಡಿ.  ಸ್ವಾಮಿಗೆ ಭಕ್ತಿಯಿಂದ ಆ ಹಣವನ್ನು ಮಾನಸಿಕವಾಗಿಯೇ ಸಮರ್ಪಣೆ ಮಾಡಿ.

ಆ ನಂತರ ಆ ಹಣದಿಂದ ಯಾರಿಗೆ ತುಂಬ ಉಪಯೋಗವಿದೆಯೋ ಅಂತಹವರನ್ನು ಆರಿಸಿಕೊಳ್ಳಿ.

ತುಂಬ ಜನರಿಗೆ ಮನೆಯಲ್ಲಿ ಅಕ್ಕಿ ಬೇಳೆಗಳೇ ಇರುವದಿಲ್ಲ. ಉಡಲು ವಸ್ತ್ರ ಇರುವದಿಲ್ಲ. ಅನಾರೋಗ್ಯವಿರುತ್ತದೆ, ಕೊಳ್ಳಲು ಔಷಧಿ ಇರುವದಿಲ್ಲ. ಅಂತಹವರು ನಿಮ್ಮ ಪರಿಚಯದಲ್ಲಿಯೇ ಇರುತ್ತಾರೆ. ದೇವರಿಗೆ ಮಾನಸಿಕವಾಗಿ ಸಮರ್ಪಿಸಿದ ಆ ಹಣವನ್ನು ನೇರವಾಗಿ ಅವರಿಗೇ ತಲುಪಿಸಿ.

ದೇವರು ನಿಶ್ಚಿತವಾಗಿ ತೃಪ್ತನಾಗುತ್ತಾನೆ.

ಇನ್ನು ಕೆಲವರು ನಿಸ್ಪೃಹರಾಗಿ ಅನ್ನದಾನ ಮಾಡುತ್ತಿರುತ್ತಾರೆ. ಗೋಸೇವೆಯನ್ನು ಮಾಡುತ್ತಿರುತ್ತಾರೆ. ಅಂತಹವರಿಗೆ ಅವರಿಗೆ ಬೇಕಾದ ಪದಾರ್ಥಗಳನ್ನು ಕೊಡಿಸಿಕೊಡಿ. ದೇವರು ತೃಪ್ತನಾಗುತ್ತಾನೆ.

ಮನೆದೇವರಿಗೆ ಸಮರ್ಪಿಸಿದ್ದರಿಂದ ಅದು ಸಮರ್ಪಣೆಯೂ ಆಯಿತು. ಅದನ್ನು ಯೋಗ್ಯರಿಗೆ ತಲುಪಿಸಿದ್ದರಿಂದಲೂ ಭಗವಂತ ಹೆಚ್ಚಿನ ಅನುಗ್ರಹವನ್ನು ಮಾಡುತ್ತಾನೆ. ಇದಕ್ಕೆ ನಿದರ್ಶನವೂ ಇದೆ.

ವರ್ತಕನೊಬ್ಬ ಶ್ರೀನಿವಾಸದೇವರ ಸೇವೆ ಮಾಡಲು ಹೊರಟಿರುತ್ತಾನೆ. ದೇವರು ಕನಸಿನಲ್ಲಿ ಬಂದು ನೀನು ಸಮರ್ಪಣೆ ಮಾಡಲಿರುವ ಪದಾರ್ಥಗಳನ್ನೆಲ್ಲ ಈ ಕಾಡಿಗೊಬ್ಬ ಸಂನ್ಯಾಸಿಗಳು ಬಂದಿದ್ದಾರೆ ಅವರಿಗೆ ನೀಡು ಎಂದು ಆದೇಶಿಸುತ್ತಾನೆ.

ಶ್ರೀಪಾದರಾಜರನ್ನು ಪರೀಕ್ಷೆ ಮಾಡಲು ಅವರನ್ನು ಕೆಲವರು ಕಾಡಿಗೆ ಕರೆದುಕೊಂಡು ಬಂದಿರುತ್ತಾರೆ. ಆ ವರ್ತಕ ಅವರಿಗೆ ಅದನ್ನು ಸಮರ್ಪಿಸಿ ದೇವರ ಅನುಗ್ರಹವನ್ನು ಪಡೆಯುತ್ತಾನೆ.

ಶ್ರೀ ವಿಜಯದಾಸರು ಗಂಗಾಯಾತ್ರೆಗೆ ಹೋಗಿ ಅಲ್ಲಿಂದ ಗಂಗೆಯನ್ನು ತರುತ್ತಿರುತ್ತಾರೆ. ಮಾರ್ಗದಲ್ಲಿ ಒಂದು ಕತ್ತೆ ಬಾಯಾರಿಕೆಯಿಂದ ಬಳಲುತ್ತಿರುತ್ತದೆ. ಶ್ರೀ ವಿಜಯದಾಸಾರ್ಯರು ಅಷ್ಟು ದೂರದಿಂದ ಜೋಪಾನವಾಗಿ, ಶುದ್ಧವಾಗಿ ತಂದಿದ್ದ ಗಂಗೆಯನ್ನು ತೆಗೆದು ಕತ್ತೆಗೆ ಕುಡಿಸಿಬಿಡುತ್ತಾರೆ. ಶಿಷ್ಯರು ಕೇಳಿದರೆ, ಗಂಗೆಗೆ ಮತ್ತೆ ಹೋಗಬಹುದು, ಕತ್ತೆಯನ್ನು ಉಳಿಸಿಕೊಳ್ಳಲಾದೀತೆ ಎಂದು ಪ್ರಶ್ನೆ ಮಾಡುತ್ತಾರೆ. ಅಂದರೆ, ಸಾಯುತ್ತಿರುವ ಕತ್ತೆಗೆ ನೀರು ನೀಡುವದು ಮನೆಯಲ್ಲಿ ಗಂಗೆಯನ್ನಿಟ್ಟುಕೊಂಡು ಪೂಜೆ ಮಾಡುವದಕ್ಕಿಂತ ಮಿಗಿಲಾದದ್ದು ಎಂದು ದಾಸಾರ್ಯರು ಆಚರಿಸಿ ತೋರಿಸಿದರು.

ಶ್ರೀಮಚ್ಚಂದ್ರಿಕಾಚಾರ್ಯರು ಭವ್ಯವಾದ ದೇವಸ್ಥಾನಗಳನ್ನು ಕಟ್ಟಿಸಲಿಲ್ಲ. ಸಾಧಾರಾಣವಾದ

ಹನುಮಂತನ ಗುಡಿಗಳನ್ನು ಕಟ್ಟಿಸಿದರು. ಅಲ್ಲಿ ಬ್ರಾಹ್ಮಣರಿಗೆ, ಶೂದ್ರರಿಗೆ ಬದುಕಲು ವ್ಯವಸ್ಥೆ ಅದ್ದೂರಿಯಾಗಿ ಮಾಡಿದರು. ತಮ್ಮ ಜೀವಿತ ಕಾಲದಲ್ಲಿ ನೂರಾರು ಕೆರೆಗಳನ್ನು ಕಟ್ಟಿಸಿದರು.

ಘೋರವಾದ ಬರಗಾಲ ಬಂದಾಗ ಮಠದಲ್ಲಿ ಸುಮಾರು ಒಂದೂವರೆ ಟನ್ನು ಬಂಗಾರವನ್ನೆಲ್ಲ ಮಾರಿ  ಶ್ರೀ ವಿದ್ಯಾಸಿಂಧುತೀರ್ಥರು ಜನರನ್ನು ಬದುಕಿಸಿದರು.

ಇವೆಲ್ಲ ಘಟನೆಗಳು ಏನು ಹೇಳುತ್ತವೆ? ಕಷ್ಟದಲ್ಲಿರುವವರಿಗೆ ಮಾಡುವ ಸಹಾಯ, ಪಾತ್ರರಿಗೆ ಮಾಡುವ ದಾನವೇ ಅತ್ಯಂತ ಶ್ರೇಷ್ಠವಾದ ಫಲವನ್ನು ನೀಡುತ್ತದೆ ಎಂದು. ನಾವೂ ಅದನ್ನೇ ಅನುಸರಿಸಬೇಕು.

ನಮ್ಮ ಸುತ್ತಮುತ್ತಲೂ ಹತ್ತಾರು ರೀತಿಯ ಸಮಸ್ಯೆ ಉಳ್ಳ ಜನರಿದ್ದಾರೆ. ಬಡತನವಿದೆ. ಹಸಿವಿದೆ. ನೋವಿದೆ. ಅವರಿಗೆ ಹೆಗಲಾಗಿ ನಿಲ್ಲುವದೇ ಮನೆದೇವರ ಪೂಜೆ.

ದೊಡ್ಡ ಕಾರ್ಯ ಮಾಡುವ ಜನರಿರುತ್ತಾರೆ. ಅವರ ನಿಸ್ಪೃಹತೆಯನ್ನು ಪ್ರಾಮಾಣಿಕತೆಯನ್ನು ಪರೀಕ್ಷಿಸಿ ಅವರಿಗೆ ಅವಶ್ಯವಾಗಿ ದಾನವನ್ನು ನೀಡಿ. ಭಗವಂತ ಮೆಚ್ಚುತ್ತಾನೆ.

ಹುಂಡಿಗಳಲ್ಲಿ ಹಣ ಸೇರಿ, ಆ ದೇವಸ್ಥಾನವನ್ನು ನಡೆಸುವ ಸರಕಾರದವರೋ, ಜನರೋ ಅದನ್ನು ದುರುಪಯೋಗ ಮಾಡಿದಲ್ಲಿ ಅದರಿಂದ ನಮ್ಮ ದೇಶ ಸಂಸ್ಕೃತಿಗಳಿಗೇ ತೊಂದರೆಯಾಗುತ್ತದೆ. ಅದಕ್ಕೆ ನಾವೂ ಕಾರಣರಾಗುವದು ಬೇಡ.

ಮತ್ತು ದುರುಪಯೋಗ ನಡೆಯುತ್ತಿರುವದನ್ನು, ಹಿಂದೂಗಳ ಹಣದಿಂದ ಹಿಂದೂವಿರೋಧಿಗಳನ್ನು ಬೆಳೆಸುತ್ತಿದ್ದಾರೆ ಎನ್ನುವದನ್ನು ಇವತ್ತಿಗೆ ಅನೇಕಜನರು ಅಂಕಿ ಅಂಶಗಳ ಸಮೇತ ಸಾಬೀತು ಪಡಿಸಿದ್ದಾರೆ. ಹೀಗಾಗಿ ಈ ರೀತಿಯ ದೇವಸ್ಥಾನಗಳಿಗೆ ನಾವು ಹಣ ನೀಡುವ ಕಾಲ ಮುಗಿದಿದೆ ಎಂದೇ ನನ್ನ ಅಭಿಪ್ರಾಯ.

ದೇವರು ಎಲ್ಲೆಡೆ ವ್ಯಾಪ್ತ ಎಂದು ಒಪ್ಪಿ ನಡೆಯುವ ಜನ ನಾವು.

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಭಗವಂತ ಇದ್ದಾನೆ ಎಂದು ಉಪಾಸನೆ ಮಾಡುವವರು ನಾವು.

ಯಾವ ಸಜ್ಜನರಿಗೆ ಯಾವ ವಸ್ತುವಿನ ಆವಶ್ಯಕತೆಯಿದೆಯೋ ಆ ವಸ್ತುವನ್ನು ಆ ಸಜ್ಜನರಿಗೆ ನೀಡುವದರಿಂದ ಶ್ರೀಹರಿಗೆ ನಿಶ್ಚಿತವಾಗಿ ತೃಪ್ತಿಯಾಗುತ್ತದೆ.

ಕೆಟ್ಟ ಕೆಲಸವನ್ನು ಮಾಡತಕ್ಕದ್ದಲ್ಲ, ಕೆಟ್ಟ ಕೆಲಸವನ್ನು ಮಾಡುವವರಿಗೆ ಸಹಾಯ ಮಾಡತಕ್ಕದ್ದಲ್ಲ.  ಸಹಾಯ ಮಾಡಿದರೂ ಕೆಟ್ಟ ಕೆಲಸ ಮಾಡಿದಷ್ಟೇ ಪಾಪ.

**ಇನ್ನು ಶ್ರೀ ವಿಜಯೀಂದ್ರ ಅವರು ಕೇಳಿದ ಪ್ರಶ್ನೆ. ಪೂಜೆ ಮಾಡಲು ಅನರ್ಹರಾದವರು ಪೂಜೆ ಮಾಡುವಾಗ ನಾವು ದಕ್ಷಿಣೆ ನೀಡಬೇಕೇ ಎಂದು.**

ಸರ್ವಥಾ ನೀಡಬಾರದು.

ಶಾಸ್ತ್ರದ ಉಲ್ಲಂಘನೆ ಮಾಡುವ ಜನರು ಎಂದಿಗೂ ಪಾತ್ರರಲ್ಲ, ದಾನಕ್ಕೆ ಅರ್ಹರಲ್ಲ. ಅವರಿಗೆ ಮಾಡುವ ದಾನ ತಾಮಸ ದಾನ.

ದಾನದ ಪರಿಧಿಯಲ್ಲಿ ಬರುವದಿಲ್ಲ.

ಮನೆದೇವರ ಬಳಿ ಹೋದಾಗ ಶ್ರೀಮದಾಚಾರ್ಯರು ತೋರಿಸಿದ ದಾರಿಯನ್ನು ಅನುಸರಿಸೋಣ. ಅವರು ಗೀತಾಭಾಷ್ಯ, ಸೂತ್ರಭಾಷ್ಯಾದಿ ಗ್ರಂಥಗಳನ್ನು ಬರೆದು ದೇವರಿಗೆ ಸಮರ್ಪಿಸಿದರು.

ನಾವು ಒಂದು ಹೊಸದಾದ ಸ್ತೋತ್ರ, ಹಾಡು ಕಲಿತು ದೇವರಿಗೆ ಸಮರ್ಪಿಸೋಣ.

ಹಣವನ್ನು ವಿನಿಯೋಗಿಸುವಾಗ ಶ್ರೀ ವ್ಯಾಸರಾಜಗುರುಸಾರ್ವಭೌಮರ ಮಾರ್ಗವನ್ನು ಅನುಸರಿಸೋಣ.

ದೇವರಿಗೆ ಸಮರ್ಪಿಸಬೇಕಾದ ಹಣವನ್ನು ದೇವರ ಮುಂದಿಟ್ಟು, ಸಮರ್ಪಿಸಿ ಅದನ್ನು ಕಷ್ಟದಲ್ಲಿರುವವರಿಗೆ ನೀಡೋಣ, ಶಾಸ್ತ್ರರಕ್ಷಣೆ,

ಗೋರಕ್ಷಣೆ, ವಿದ್ಯಾರ್ಥಿಗಳ ರಕ್ಷಣೆ ಮುಂತಾದ ದೊಡ್ಡ ಕೆಲಸ ಮಾಡುತ್ತಿರುವ ಜನರಿಗೆ ನೀಡೋಣ.

ಶ್ರೀವಿಜಯದಾಸಾರ್ಯರಿಗೆ ದೊರೆತಂತ ಭಾಗ್ಯ ಎಲ್ಲರಿಗೂ ದೊರೆಯುವದಿಲ್ಲ. ಒಂದು ಜೀವವನ್ನೇ ಉಳಿಸುವ ಸಂದರ್ಭ, ಒಂದು ದೊಡ್ಡದಾದ ಕಾರ್ಯವನ್ನು ಮಾಡುವ ಜನರಿಗೆ ಹೆಗಲಾಗುವ ಪುಣ್ಯ ಜೀವನದಲ್ಲಿಯೇ ಒಮ್ಮೆ ದೊರಕುವದೂ ಕಷ್ಟ. ದೊರಕಿದಾಗ ಮಾಡಿಬಿಡಬೇಕು.
ಒಟ್ಟಾರೆ ತಾತ್ಪರ್ಯವಿಷ್ಟು — ಶಾಸ್ತ್ರದ ಉಲ್ಲಂಘನೆ ಮಾಡುವ ವ್ಯಕ್ತಿ ಬ್ರಾಹ್ಮಣನಾಗಿರಲಿ, ಬ್ರಾಹ್ಮಣೇತರನಾಗಿರಲಿ ದಾನಕ್ಕೆ ಅನರ್ಹ.

ದೇವಸ್ಥಾನಗಳಲ್ಲಿ, ಮಠ ಮಾನ್ಯಗಳಲ್ಲಿ ಹಣ ದುರುಪಯೋಗವಾಗುತ್ತಿದ್ದರೆ ಸರ್ವಥಾ ನೀಡತಕ್ಕದ್ದಲ್ಲ, ನೀಡಿ ಅವರ ಪಾಪಕ್ಕೆ ನಾವು ಹೊಣೆಯಾಗತಕ್ಕದ್ದಲ್ಲ.

ಯಾವುದೇ ದಾನವನ್ನು ನೀಡಬೇಕಾದರೆ, ದಾನ ತೆಗೆದುಕೊಳ್ಳುವ ವ್ಯಕ್ತಿ ಇದಕ್ಕೆ ಅರ್ಹನೇ ಎಂದು ಖಾತ್ರಿ ಪಡಿಸಿಕೊಳ್ಳಿ.  ಅವನ ಪ್ರಾಮಾಣಿಕತೆ

ನಿಸ್ಪೃಹತೆಯನ್ನು ಅಳೆಯಿರಿ.  ಆ ನಂತರ ದಾನ ನೀಡಿ.

ಅನ್ನ, ವಸ್ತ್ರ, ಔಷಧಿಗಳಿಗೆ ಪರದಾಡುತ್ತಿರುವ ಜನ ಇದ್ದಾಗ ದೇವರ ಹುಂಡಿಗೆ ಹಾಕುವ ಹಣವನ್ನು ಮನಸ್ಸಿನಲ್ಲಿಯೇ ದೇವರಿಗೊಪ್ಪಿಸಿ ಆ ಹಣವನ್ನು ಅವರಿಗೆ ನೀಡಿ.   ಭಗವಂತ ಮೆಚ್ಚುತ್ತಾನೆ.

ಉಪನಿಷತ್ತಿನ ಮಾತು ಎಚ್ಚರದಲ್ಲಿರಲಿ. **“ಯದೇವ ವಿದ್ಯಯಾ, ಶ್ರದ್ಧಯಾ ಉಪನಿಷದಾ ಕರೋತಿ ತದೇವ ವಿರ್ಯವತ್ತರಂ ಭವತಿ”**.

ಯಾವ ಕರ್ಮವನ್ನು ತಿಳುವಳಿಕೆ, ಶ್ರದ್ಧೆ ಮತ್ತು ಅನುಸಂಧಾನಪೂರ್ವಕವಾಗಿ ಮಾಡುತ್ತೇವೆಯೋ ಆ ಕರ್ಮವೇ ಫಲಪ್ರದವಾದದ್ದು.

ಅಪಾತ್ರರಿಗೆ ನೀಡುವ ದಾನ ತಾಮಸ ದಾನ ಎಂಬ ಶ್ರೀಕೃಷ್ಣನ ಮಾತು ಸದಾ ನೆನಪಿನಲ್ಲಿರಲಿ.

— ವಿಷ್ಣುದಾಸ ನಾಗೇಂದ್ರಾಚಾರ್ಯ